ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

AU – 4J Part – IVA	ಬೆಂಗಳೂರು, ಮಂಗಳವಾರ, 23, ಫೆಬ್ರವರಿ, 2021 (ಫಾಲ್ಗುಣ, 04, ಶಕವರ್ಷ, ೧೯೪2) BENGALURU, TUESDAY, 23, FEBRUARY, 2021 (Phalguna, 04, SHAKAVARSHA, 1942)	ನಂ. 202 No. 202

DEPARTMENT OF PARLIAMENTARY AFFAIRS AND LEGISLATION SECRETARIAT

NOTIFICATION

NO. DPAL: 82 SHASANA 2020, BENGALURU, DATED: 23.02.2021

The Karnataka Motor Vehicles Taxation (Second Amendment) Bill, 2020 ಇದಕ್ಕೆ 2021ರ ಫೆಬ್ರವರಿ ತಿಂಗಳ 20ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:09 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO.09 OF 2021

(First Published in the Karnataka Gazette Extra-ordinary on the 23rd day of February, 2021)

THE KARNATAKA MOTOR VEHICLES TAXATION (SECOND AMENDMENT) ACT, 2020

(Received the assent of the Governor on the 20th day of February, 2021)

An Act further to amend the Karnataka Motor Vehicles Taxation Act, 1957.

Whereas, it is expedient further to amend the Karnataka Motor Vehicles Taxation Act, 1957 (Karnataka Act 35 of 1957) for the purpose hereinafter appearing:

Be it enacted by the Karnataka State Legislature in the seventy first year of the Republic of India as follows:-

1. Short title and commencement:- (1) This Act may be called the Karnataka Motor Vehicles Taxation (Second Amendment) Act, 2020.

(2) It shall be deemed to have come into force with effect from 1st day of April 2015, except column (3) of part A 9 of the schedule which shall come into force at once.

2. Amendment of Section 3,-In the Karnataka Motor Vehicle Taxation Act, 1957 (Karnataka Act 35 of 1957) (hereinafter referred to as 'the Principal Act') in Section 3, in sub-section (1), in the fourth proviso, after the clause (d), the following clause shall be inserted; namely:-

"**(e)**In case of Combined Harvester Vehicles (as defined in clause (cb) of rule 2 of the Central Motor Vehicles Rules, 1989) tax shall be levied at the rates specified in Part-A9 of the Schedule".

3. Amendment of section 7:-In Section 7 of the principal Act, in sub-section (3), after the words, letter and figure" and Part C5", the words, letters and figures **"Part C6, Part C7 and Part C8"** shall be inserted.

4. Amendment of the Schedule:- In the Schedule to the principal Act,-

(1) after part A8 the following new part A9 shall be inserted, namely:-

"Part A9

{See Section 3 (1)}

Lifetime tax for Combine Harvester Vehicle (As defined under rule 2 clause (cb) of the Central Motor Vehicle rules, 1989)

Sl No **(1)**	**Class of Vehicle** **(2)**	**Combine Harvester Vehicle used for Sugar Cane Harvesting only With effect from the date of publication of the Karnataka Motor Vehicles Taxation (Second Amendment) Act, 2020** **(3)**	**Subject to column (3) Combine Harvester Vehicle including Sugar Cane Harvester With effect from 1st April 2015** **(4)**
A	At the time of Registration of New Vehicles	3 percent of the cost of the vehicle	6 percent of the cost of the Vehicle.
B	If the Vehicle is already registered and its age from the month of Registration is:	Percentage of the Life Time Tax Levied under serial number A	Percentage of the Life Time Tax Levied under serial number A
1	Not more than 2 years	93%	93%

2	More than 2 years but not more than 3 years	87%	87%
3	More than 3 years but not more than 4 years	81%	81%
4	More than 4 years but not more than 5 years	75%	75%
5	More than 5 years but not more than 6 years	69%	69%
6	More than 6 years but not more than 7 years	64%	64%
7	More than 7 years but not more than 8 years	59%	59%
8	More than 8 years but not more than 9 years	54%	54%
9	More than 9 years but not more than 10 years	49%	49%
10	More than 10 years but not more than 11 years	45%	45%
11	More than 11 years but not more than 12 years	41%	41%
12	More than 12 years but not more than 13 years	37%	37%
13	More than 13 years but not more than 14 years	33%	33%
14	More than 14 years but not more than 15 years	29%	29%
15	More than 15 years	25%	25%

Notes :

Cost of the Vehicle in relation to a motor Vehicle means,-

(a) In respect of a vehicle manufactured in India, cost of the Vehicle as per the purchase invoice issued either by the manufacturer or by the dealer of the vehicle including the excise duty, surcharge or cess, Goods and Services Tax etc., as payable in the State of Karnataka whichever is higher; and

(b) In respect of an imported motor vehicle, irrespective of its place of manufacture, the total cost incurred in importing the vehicle, that is to say, the value of the motor vehicle as endorsed in the bill of entry or such other document and assessed as such under the Customs Act, 1962, together with the customs duty levied freight charges incurred and other taxes levied there upon including additional duty/penalty levied if any, by the Customs Department or any other Department."

(2) **after part C7 the following new part shall be inserted, namely:-**

"Part C8
{See Section 7 (3)}

Refund Table for Combined Harvester Vehicles

Sl. No. **(1)**	**If after the Registration removal of vehicle or cancellation of Registration of vehicle taken place.** **(2)**	**Percentage of Life Time Tax Paid to be Refunded** **(3)**
1	**Within a year**	**93%**
2	After 1 year but within 2 years	**87%**
3	After 2 year but within 3 years	**81%**
4	After 3 year but within 4 years	**75%**
5	After 4 year but within 5 years	**69%**
6	After 5 year but within 6 years	**64%**
7	After 6 year but within 7 years	**59%**
8	After 7 year but within 8 years	**54%**
9	After 8 year but within 9 years	**49%**
10	After 9 year but within 10 years	**45%**
11	After 10 year but within 11 years	**41%**
12	After 11 year but within 12 years	**37%**
13	After 12 year but within 13 years	**33%**
14	After 13 year but within 14 years	**29%**
15	After 14 year but within 15 years	**25%**
16	After 15 years	**Nil"**

By order and in the name of
the Governor of Karnataka

(K. DWARAKANATH BABU)
Secretary to Government
Department of Parliamentary Affairs
and Legislation

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 82 ಶಾಸನ 2020, ಬೆಂಗಳೂರು, ದಿನಾಂಕ: 23.02.2021

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Motor Vehicles Taxation (Second Amendment) Act, 2020 (Karnataka Act 09 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:09

(2021 ರ ಫೆಬ್ರವರಿ ತಿಂಗಳ 23ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಅಧಿನಿಯಮ, 2020

(2021 ರ ಫೆಬ್ರವರಿ ತಿಂಗಳ 20ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಅನುಸೂಚಿಯ ಎ-9 ಭಾಗದ ಕಾಲಂ (3) ಈ ಕೂಡಲೇ ಜಾರಿಗೆ ಬರತಕ್ಕದ್ದು, ಇದನ್ನು ಹೊರತುಪಡಿಸಿ 2015ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) (ಇಲ್ಲಿ ಇನ್ನುಮುಂದೆ ಮೂಲ

ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ ನಾಲ್ಕನೇ ಪರಂತುಕದಲ್ಲಿ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇ) ಸಂಯೋಜಿತ ಕೊಯ್ಲು ವಾಹನಗಳ (ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ 2ನೇ ನಿಯಮದ (ಸಿಬಿ) ಖಂಡದಲ್ಲಿ ಪರಿಭಾಷಿಸಿದಂತೆ) ಸಂಬಂಧದಲ್ಲಿ ಅನುಸೂಚಿಯ ಎ9ನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು."

3. 7ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 7ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿನ "ಭಾಗ ಸಿ5 ರಲ್ಲಿ" ಎಂಬ ಪದಗಳು ಅಕ್ಷರಗಳು ಹಾಗೂ ಅಂಕಿಗಳ ತರುವಾಯ "ಭಾಗ ಸಿ6, ಭಾಗ ಸಿ7 ಮತ್ತು ಭಾಗ ಸಿ8ರಲ್ಲಿ" ಎಂಬ ಪದಗಳನ್ನು ಅಕ್ಷರಗಳನ್ನು ಹಾಗೂ ಅಂಕಿಗಳನ್ನು ಸೇರಿಸತಕ್ಕದ್ದು.

4. ಅನುಸೂಚಿಯ ತಿದ್ದುಪಡಿ.- ಮೂಲ ಅಧಿನಿಯಮದ ಅನುಸೂಚಿಯಲ್ಲಿ,-

(1) ಭಾಗ - ಎ8 ರ ತರುವಾಯ ಈ ಮುಂದಿನ ಹೊಸ ಭಾಗ ಎ9 ನ್ನು ಸೇರಿಸತಕ್ಕದ್ದು, ಎಂದರೆ:-

"ಭಾಗ-ಎ9
{3 (1)ನೇ ಪ್ರಕರಣವನ್ನು ನೋಡಿ}
ಸಂಯೋಜಿತ ಕೊಯ್ಲು ವಾಹನಗಳ (ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ 2ನೇ ನಿಯಮದ (ಸಿಬಿ) ಖಂಡದಲ್ಲಿ ಪರಿಭಾಷಿಸಿದಂತೆ) ಆಜೀವ ತೆರಿಗೆ

ಕ್ರಮ ಸಂಖ್ಯೆ (1)	ವಾಹನಗಳ ವರ್ಗ (2)	ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಅಧಿನಿಯಮ, 2020 ರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರುವಂತೆ ಕಬ್ಬಿನ ಕೊಯ್ಲಿಗೆ ಮಾತ್ರ ಬಳಸುವ ಸಂಯೋಜಿತ ಕೊಯ್ಲು ವಾಹನ (3)	ಕಾಲಂ (3)ಕ್ಕೆ ಒಳಪಟ್ಟು 2015ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಕಬ್ಬಿನ ಕೊಯ್ಲು ವಾಹನವನ್ನು ಒಳಗೊಂಡ ಸಂಯೋಜಿತ ಕೊಯ್ಲು ವಾಹನ (4)
ಎ	ಹೊಸ ವಾಹನದ ನೋಂದಣಿ ಸಮಯದಲ್ಲಿ	ವಾಹನದ ಬೆಲೆಯ ಶೇಕಡಾ 3	ವಾಹನದ ಬೆಲೆಯ ಶೇಕಡಾ 6
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು	ಎ ಖಂಡದ ಅಡಿಯಲ್ಲಿ ವಿಧಿಸಿದ ಆಜೀವ ತೆರಿಗೆಯ ಶೇಕಡಾವಾರು	ಎ ಖಂಡದ ಅಡಿಯಲ್ಲಿ ವಿಧಿಸಿದ ಆಜೀವ ತೆರಿಗೆಯ ಶೇಕಡಾವಾರು
1.	2 ವರ್ಷಗಳಿಗೆ ಮೀರದಿದ್ದಲ್ಲಿ	93%	93%
2.	2 ವರ್ಷಗಳಿಗೆ ಮೀರಿದ್ದು ಆದರೆ 3 ವರ್ಷಗಳಿಗೆ ಮೀರದಿದ್ದಲ್ಲಿ	87%	87%

3.	3 ವರ್ಷಗಳಿಗೆ ಮೀರಿದ್ದು ಆದರೆ 4 ವರ್ಷಗಳಿಗೆ ಮೀರದಿದ್ದಲ್ಲಿ	81%	81%
4.	4 ವರ್ಷಗಳಿಗೆ ಮೀರಿದ್ದು ಆದರೆ 5 ವರ್ಷಗಳಿಗೆ ಮೀರದಿದ್ದಲ್ಲಿ	75%	75%
5.	5 ವರ್ಷಗಳಿಗೆ ಮೀರಿದ್ದು ಆದರೆ 6 ವರ್ಷಗಳಿಗೆ ಮೀರದಿದ್ದಲ್ಲಿ	69%	69%
6.	6 ವರ್ಷಗಳಿಗೆ ಮೀರಿದ್ದು ಆದರೆ 7 ವರ್ಷಗಳಿಗೆ ಮೀರದಿದ್ದಲ್ಲಿ	64%	64%
7.	7 ವರ್ಷಗಳಿಗೆ ಮೀರಿದ್ದು ಆದರೆ 8 ವರ್ಷಗಳಿಗೆ ಮೀರದಿದ್ದಲ್ಲಿ	59%	59%
8.	8 ವರ್ಷಗಳಿಗೆ ಮೀರಿದ್ದು ಆದರೆ 9 ವರ್ಷಗಳಿಗೆ ಮೀರದಿದ್ದಲ್ಲಿ	54%	54%
9.	9 ವರ್ಷಗಳಿಗೆ ಮೀರಿದ್ದು ಆದರೆ 10 ವರ್ಷಗಳಿಗೆ ಮೀರದಿದ್ದಲ್ಲಿ	49%	49%
10.	10 ವರ್ಷಗಳಿಗೆ ಮೀರಿದ್ದು ಆದರೆ 11 ವರ್ಷಗಳಿಗೆ ಮೀರದಿದ್ದಲ್ಲಿ	45%	45%
11.	11 ವರ್ಷಗಳಿಗೆ ಮೀರಿದ್ದು ಆದರೆ 12 ವರ್ಷಗಳಿಗೆ ಮೀರದಿದ್ದಲ್ಲಿ	41%	41%
12.	12 ವರ್ಷಗಳಿಗೆ ಮೀರಿದ್ದು ಆದರೆ 13 ವರ್ಷಗಳಿಗೆ ಮೀರದಿದ್ದಲ್ಲಿ	37%	37%
13.	13 ವರ್ಷಗಳಿಗೆ ಮೀರಿದ್ದು ಆದರೆ 14 ವರ್ಷಗಳಿಗೆ ಮೀರದಿದ್ದಲ್ಲಿ	33%	33%
14.	14 ವರ್ಷಗಳಿಗೆ ಮೀರಿದ್ದು ಆದರೆ 15 ವರ್ಷಗಳಿಗೆ ಮೀರದಿದ್ದಲ್ಲಿ	29%	29%
15	15 ವರ್ಷಗಳಿಗೆ ಮೀರಿದ್ದಲ್ಲಿ	25%	25%

ಟಿಪ್ಪಣಿಗಳು:

ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:-

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕನಿಂದಾಗಲೀ ಅಥವಾ ವ್ಯಾಪಾರಿಯು ನೀಡಿದ, ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಅಧಿಕರ ಅಥವಾ ಉಪಕರ, ಸರಕು ಮತ್ತು ಸೇವೆಗಳ ತೆರಿಗೆ ಇತ್ಯಾದಿಗಳನ್ನು ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡಬಹುದಾದಂತೆ ಯಾವುದು ಹೆಚ್ಚೋ ಅದನ್ನು ಒಳಗೊಂಡ ಖರೀದಿ ಪಟ್ಟಿಯನ್ವಯ ವಾಹನದ ಬೆಲೆ; ಮತ್ತು

(ಬಿ) ಭಾರತಕ್ಕೆ ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ವಾಹನವನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ, ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ದಸ್ತಾವೇಜಿನಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಸುಂಕಗಳ ಅಧಿನಿಯಮ, 1962 ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾ ಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ

ಸುಂಕಗಳ ಇಲಾಖೆಯಿಂದ ಅಥವಾ ಯಾವುದೇ ಇತರ ಇಲಾಖೆಯಿಂದ ವಿಧಿಸಿದ ಹೆಚ್ಚುವರಿ ಸುಂಕ/ ದಂಡವು ಯಾವುದಾದರೂ ಇದ್ದಲ್ಲಿ ಅವುಗಳೂ ಸೇರಿದಂತೆ ಅವುಗಳ ಮೇಲೆ ವಿಧಿಸಲಾದ ಇತರ ತೆರಿಗೆಗಳು**".**

(2) ಭಾಗ-ಸಿ7ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಭಾಗ – ಸಿ 8

{7 (3)ನೇ ಪ್ರಕರಣವನ್ನು ನೋಡಿ}

ಸಂಯೋಜಿತ ಕೊಯ್ಲು ವಾಹನಗಳಿಗೆ ಮರುಪಾವತಿ ಕೋಷ್ಟಕ

ಕ್ರಮ ಸಂಖ್ಯೆ (1)	ನೋಂದಣಿಯ ತರುವಾಯ ವಾಹನದ ಸ್ಥಳಾಂತರವಾಗಿದ್ದರೆ ಅಥವಾ ವಾಹನದ ನೋಂದಣಿಯು ರದ್ದಾಗಿದ್ದರೆ,- (2)	ಮರುಸಂದಾಯ ಮಾಡಲು ಸಂದಾಯ ಮಾಡಿದ ಆಜೀವ ತೆರಿಗೆಯ ಶೇಕಡಾವಾರು (3)
1.	ಒಂದು ವರ್ಷದೊಳಗೆ	93%
2.	1 ವರ್ಷದ ತರುವಾಯ ಆದರೆ 2 ವರ್ಷಗಳೊಳಗೆ	87%
3.	2 ವರ್ಷದ ತರುವಾಯ ಆದರೆ 3 ವರ್ಷಗಳೊಳಗೆ	81%
4.	3 ವರ್ಷದ ತರುವಾಯ ಆದರೆ 4 ವರ್ಷಗಳೊಳಗೆ	75%
5.	4 ವರ್ಷದ ತರುವಾಯ ಆದರೆ 5 ವರ್ಷಗಳೊಳಗೆ	69%
6.	5 ವರ್ಷದ ತರುವಾಯ ಆದರೆ 6 ವರ್ಷಗಳೊಳಗೆ	64%
7.	6 ವರ್ಷದ ತರುವಾಯ ಆದರೆ 7 ವರ್ಷಗಳೊಳಗೆ	59%
8.	7 ವರ್ಷದ ತರುವಾಯ ಆದರೆ 8 ವರ್ಷಗಳೊಳಗೆ	54%
9.	8 ವರ್ಷದ ತರುವಾಯ ಆದರೆ 9 ವರ್ಷಗಳೊಳಗೆ	49%
10.	9 ವರ್ಷದ ತರುವಾಯ ಆದರೆ 10 ವರ್ಷಗಳೊಳಗೆ	45%
11.	10 ವರ್ಷದ ತರುವಾಯ ಆದರೆ 11 ವರ್ಷಗಳೊಳಗೆ	41%
12.	11 ವರ್ಷದ ತರುವಾಯ ಆದರೆ 12 ವರ್ಷಗಳೊಳಗೆ	37%
13.	12 ವರ್ಷದ ತರುವಾಯ ಆದರೆ 13 ವರ್ಷಗಳೊಳಗೆ	33%
14.	13 ವರ್ಷದ ತರುವಾಯ ಆದರೆ 14 ವರ್ಷಗಳೊಳಗೆ	29%
15.	14 ವರ್ಷದ ತರುವಾಯ ಆದರೆ 15 ವರ್ಷಗಳೊಳಗೆ	25%
16.	15 ವರ್ಷಗಳ ತರುವಾಯ	ಏನು ಇಲ್ಲ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

The above translation of the Karnataka Motor Vehicles Taxation (Second Amendment) Act, 2020 (Karnataka Act 09 of 2021) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ವಜುಭಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ದ್ವಾರಕನಾಥ್ ಬಾಬು)

ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE Digitally signed by SUNIL GARDE
Date: 2021.02.23 17:25:37 +05'30'